**ದಿನಾಂಕ: 29/03/2021**

**ಜಿಗಣಿ ಪೊಲೀಸ್ ಠಾಣೆ.**

## ಕುಖ್ಯಾತ ಮೊಬೈಲ್ ಸುಲಿಗೆಕೋರನ ಬಂಧನ

## 04 ಲಕ್ಷಕ್ಕೂ ಅಧಿಕ ಬೆಲೆಬಾಳುವ 40 ಮೊಬೈಲ್ ಫೋನ್ ಗಳು ವಶಕ್ಕೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ಉಪ-ವಿಭಾಗ, ಜಿಗಣಿ ಪೊಲೀಸ್ ಠಾಣೆಯ ಪೊಲೀಸರು ಜಿಗಣಿ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಸೂರ್ಯಸಿಟಿ, ಹೆಬ್ಬಗೋಡಿ ಮುಂತಾದ ಕಡೆಗಳಲ್ಲಿ ತಡರಾತ್ರಿ ಒಂಟಿಯಾಗಿ ಓಡಾಡುವ ಕಾರ್ಮಿಕರು ಮತ್ತು ಸಾರ್ವಜನಿಕರ ಬಳಿ ಸುಲಿಗೆ ಮಾಡಿದ್ದ 4 ಲಕ್ಷಕ್ಕೂ ಅಧಿಕ ಮೌಲ್ಯದ ವಿವಿಧ ಕಂಪನಿಯ 40 ಮೊಬೈಲ್ ಫೋನ್ ಗಳನ್ನು ಆರೋಪಿ ಸತೀಶ ಬಿನ್ ಮುನಿಕೃಷ್ಣ, ಕ್ಯಾಲಸನಹಳ್ಳಿ ಗ್ರಾಮ ಎಂಬುವರನ್ನು ದಸ್ತಗಿರಿ ಮಾಡಿ ಮೊಬೈಲ್ ಫೋನ್ ಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿರುತ್ತಾರೆ.

ದಿನಾಂಕ; 26-03-2021ರಂದು ಸಂಜೆ 7-00 ಗಂಟೆ ಸಮಯದಲ್ಲಿ ಜಿಗಣಿ ಪೊಲೀಸ್ ಠಾಣಾ ಸರಹದ್ದು, ಸಿಪ್ಲಾ ಕಂಪನಿ ಸರ್ಕಲ್ ಬಳಿ ಠಾಣಾ ಹೆಚ್.ಸಿ-548 ಮಹೇಶ್ ಕೆ.ಕೆ ಮತ್ತು ಹೆಚ್.ಸಿ-627 ಪ್ರದೀಪ್ ರವರು ನಾಕಾಬಂದಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಮೊಬೈಲ್ ಸುಲಿಗೆಕೋರನು ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದವನನ್ನು ಬೆನ್ನತ್ತಿ ಹಿಡಿದು ಪೊಲೀಸ್ ಠಾಣೆಗೆ ಕರೆತಂದು ಹಾಜರುಪಡಿಸಿದ್ದರ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ.

ಈ ಪ್ರಕರಣದಲ್ಲಿ ಮಾನ್ಯ ಬೆಂಗಳೂರು ಜಿಲ್ಲೆ, ಪೊಲೀಸ್ ಅಧೀಕ್ಷಕರವರಾದ ಶ್ರೀ. ರವಿ. ಡಿ. ಚನ್ನಣ್ಣನವರ್, ಐಪಿಎಸ್ ಮತ್ತು ಅಪರ ಪೊಲೀಸ್ ಅದೀಕ್ಷಕರಾದ ಶ್ರೀ. ಲಕ್ಷ್ಮಿ ಗಣೇಶ್ ಕೆ.ಎಸ್.ಪಿ.ಎಸ್ ರವರುಗಳ ನಿರ್ದೇಶನದಲ್ಲಿ, ಆನೇಕಲ್ ಉಪ-ವಿಭಾಗದ ಮಾನ್ಯ ಪೊಲೀಸ್ ಉಪಾಧೀಕ್ಷಕ ರವರಾದ ಡಾ॥ ಹೆಚ್.ಎಂ.ಮಹದೇವಪ್ಪ, ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ಜಿಗಣಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್, ಶ್ರೀ. ಬಿ.ಕೆ ಶೇಖರ್ ರವರು ಹಾಗೂ ಪಿಎಸ್ಐ, ಶ್ರೀ. ಶಿವಲಿಂಗನಾಯ್ಕ ರವರು ಮತ್ತು ಅಪರಾಧ ವಿಭಾಗದ ಸಿಬ್ಬಂದಿಯವರು ಕಾರ್ಯ ಪ್ರವೃತ್ತರಾಗಿ ಆರೋಪಿ ಸತೀಶ ಬಿನ್ ಮುನಿಕೃಷ್ಣ ನೀಡಿದ ಮಾಹಿತಿಯ ಮೇರೆಗೆ ಕಳೆದ ಮೂರ್ನಾಲ್ಕು ತಿಂಗಳ ಅವಧಿಯಲ್ಲಿ, ಜಿಗಣಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಸೂರ್ಯಸಿಟಿ, ಹೆಬ್ಬಗೋಡಿ ಕಡೆಗಳಲ್ಲಿ ತಡರಾತ್ರಿ ಓಡಾಡುತ್ತಿದ್ದ ಕಾರ್ಮಿಕರು ಮತ್ತು ಸಾರ್ವಜನಿಕರಿಂದ ಸುಲಿಗೆ ಮಾಡಲಾಗಿದ್ದ ಸುಮಾರು04 ಲಕ್ಷ ರೂಗಳಿಗೂ ಅಧಿಕ ಬೆಲೆ ಬಾಳುವ ವಿವಿಧ ಕಂಪನಿಯ 40 ಮೊಬೈಲ್ ಫೋನ್ ಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿ ಯಾಗಿರುತ್ತಾರೆ.

ಎ1-ಸತೀಶ್ ಬಿನ್ ಮುನಿಕೃಷ್ಣ, 20 ವರ್ಷ, ಪರಿಶಿಷ್ಟ ಜಾತಿ, ವಾಸ ಕ್ಯಾಲಸನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು.

**ಆರೋಪಿ ಭಾವ ಚಿತ್ರ**



**04 ರಿಯಲ್ ಮಿ ಮೊಬೈಲ್ ಫೋನ್**
**01 ಇನ್ಫಿಕ್ಸ್ ಮೊಬೈಲ್ ಫೋನ್**
**03 ಒಪ್ಪೋ ಮೊಬೈಲ್ ಫೋನ್**
**08 ಎಂಐ ಮೊಬೈಲ್ ಫೋನ್**
**07 ವಿವೋ ಮೊಬೈಲ್ ಫೋನ್**
**06 ರೆಡ್ ಮಿ ಮೊಬೈಲ್ ಫೋನ್**
**01 ಹೆಚ್.ಟಿ.ಸಿ ಮೊಬೈಲ್ ಫೋನ್**

**01 ಹಾನರ್ ಮೊಬೈಲ್ ಫೋನ್**
**02 ಸ್ಯಾಮ್ ಸಂಗ್ ಮೊಬೈಲ್ ಫೋನ್**
**01 ಜಿವಿ ಮೊಬೈಲ್ ಫೋನ್**
**01 ಮೈಕ್ರೋಮ್ಯಾಕ್ಸ್ ಮೊಬೈಲ್ ಫೋನ್**
**02 ಲಾವಾ ಕೀಪ್ಯಾಡ್ ಮೊಬೈಲ್ ಫೋನ್**
**01 ಕಾರ್ಬನ್ ಕೀಪ್ಯಾಡ್ ಮೊಬೈಲ್ ಫೋನ್**
**01 ಕೀಪ್ಯಾಡ್ ಮೊಬೈಲ್ ಫೋನ್**

ಸದರಿ ಕಾರ್ಯಾಚರಣೆಯನ್ನು ಮಾನ್ಯ ಹಿರಿಯ ಪೊಲೀಸ್ ಅಧಿಕಾರಿಗಳಿ ಶ್ಲಾಘಿಸಿರುತ್ತಾರೆ.

(ರವಿ.ಡಿ.ಚನ್ನಣ್ಣನವರ್, ಐಪಿಎಸ್)
ಪೊಲೀಸ್ ಅಧೀಕ್ಷಕರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.